# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಕೆ. ಶಂಕರ್, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಬಳ್ಳೂರು ಗ್ರಾಮ ಪಂಚಾಯತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ (ಹಾಲಿ ನಿವೃತ್ತ) ಇವರ ವಿರುದ್ಧ ಲೋಕಾಯುಕ್ತ ವಿಚಾರಣೆ- ಅಂತಿಮ ಆದೇಶ ಹೊರಡಿಸುವ ಕುರಿತು- ಆದೇಶ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/233/ಗ್ರಾಪಂಕಾ/2014, ದಿನಾಂಕ: 16-06-2014.
2. ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ: LOK/INQ/14A/389/2014/ARE-10, ದಿನಾಂಕ: 22-07-2016.
3. ಮಾನ್ಯ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: LOK/ ARE-10/ENQ-389/2014, ದಿನಾಂಕ: 25-03-2017.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: LOK/ARE-10/ENQ-389/2014, ದಿನಾಂಕ: 27-03-2017.
5. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ/282/ಗ್ರಾಪಂಕಾ/2017, ದಿನಾಂಕ: 22-04-2017.
6. ಶ್ರೀ ಕೆ. ಶಂಕರ್ ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿ: 08-05-2017.
7. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:282:ಗ್ರಾಪಂಕಾ:2017, ದಿನಾಂಕ:06.07.2017.
8. ಮಾನ್ಯ ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿಯ ಆದೇಶ ಸಂಖ್ಯೆ: 4709/2017, ದಿನಾಂಕ:18.12.2018

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಕೆ. ಶಂಕರ್, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಬಳ್ಳೂರು ಗ್ರಾಮ ಪಂಚಾಯತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ (ಹಾಲಿ ನಿವೃತ್ತ) ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14-ಎ ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಯಿತು. ಆದರಂತೆ ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11 ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

"ದೋಷಾರೋಪಣೆ":

"That one Smt. Poornima Madhukumar, the then President of Ballur Gram Panchayath filed a complaint before the Government against the DGO- Sri Shankar, the then Secretary, Ballur Gram Panchayath, Anekal Taluk, Bangalore Urban District, Presently working as secretary Bannerughatta Gram Panchayath, alleging irregularities in formation of layout of Ballur Gram Panchayath and without providing basic amienities to the allotees and without bringing the allotment of the sites before the

Panchayath General Body Meeting, without there being proper boundaries to the site as per the conversion order issued by the concerned Deputy Commissioner, took steps to distribute the sites. On the basis of the complaint, Government was pleased to refer the said complaint for investigation to the Deputy Secretary, Zilla Panchayath, Bangalore City, vide his report dt.12.08.2011 found dereliction of duty and misconduct on the part of DGO committed with regard to formation of layout, distribution of sites, distribution of hakku patra, not making proper entries in the registers, not registering the proper Khata etc. Thereby DGO failed to maintain absolute integrity besides devotion to duty and committed an act which is unbecoming of a Government servant and thus you are guilty of misconduct under Rule 3(1)(i) to (iii) of KCS (Conduct) Rules 1966".

ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ವರದಿಯಲ್ಲಿ ಶ್ರೀ ಕೆ. ಶಂಕರ್, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಬಳ್ಳೂರು ಗ್ರಾಮ ಪಂಚಾಯತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ (ಹಾಲಿ ನಿವೃತ್ತ) ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ. ಈ ವರದಿಯನ್ನು ಮಾನ್ಯ ಲೋಕಾಯುಕ್ತರು ಅಂಗೀಕರಿಸಿ ಶ್ರೀ ಕೆ. ಶಂಕರ್, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಇವರ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(iii) ರ ಅನ್ವಯ **"ಅವರ ಮುಂದಿನ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ ಹಾಗೂ ಅವರಿಗೆ ಬಡ್ತಿ ನೀಡಲು ಅವರ ಪ್ರಕರಣವು ಪರಿಗಣನೆಗೆ ಬಂದ ದಿನಾಂಕದಿಂದ ಎರಡು ವರ್ಷಗಳವರೆಗೆ ಅವರ ಬಡ್ತಿಯನ್ನು ಮುಂದೂಡುವ"** ದಂಡನೆ ವಿಧಿಸಲು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಸಂಬಂಧ ಶ್ರೀ ಕೆ. ಶಂಕರ್, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ ಇವರಿಗೆ ನಿಯಮಾನುಸಾರ ಕ್ರಮಸಂಖ್ಯೆ (5) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸ್ ಅನ್ನು ಜಾರಿಗೊಳಿಸಲಾಗಿತ್ತು. ಈ ನೋಟೀಸಿಗೆ ಅವರು ಮೇಲೆ ಕ್ರಮ ಸಂಖ್ಯೆ (6) ರಲ್ಲಿ ಓದಲಾದ ಮನವಿ ಮೂಲಕ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ. ಅದನ್ನು ಪರಿಗಣಿಸಿ ಅವರ ಹೇಳಿಕೆಯನ್ನು ತಿರಸ್ಕರಿಸಿ ಅವರಿಗೆ ಮಾನ್ಯ ಲೋಕಾಯುಕ್ತರು ಶಿಫಾರಸ್ಸು ಮಾಡಿದಂತೆ **"ಅವರ ಮುಂದಿನ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ ಹಾಗೂ ಅವರಿಗೆ ಬಡ್ತಿ ನೀಡಲು ಅವರ ಪ್ರಕರಣವು ಪರಿಗಣನೆಗೆ ಬಂದ ದಿನಾಂಕದಿಂದ ಎರಡು ವರ್ಷಗಳವರೆಗೆ ಅವರ ಬಡ್ತಿಯನ್ನು ಮುಂದೂಡುವ"** ದಂಡನೆಯನ್ನು ಮೇಲೆ ಕ್ರಮ ಸಂಖ್ಯೆ (7) ರಲ್ಲಿ ಓದಲಾದ ದಿನಾಂಕ: 06.07.2017ರ ಸರ್ಕಾರದ ಆದೇಶದಲ್ಲಿ ವಿಧಿಸಲಾಗಿತ್ತು.

ಈ ಆದೇಶದ ವಿರುದ್ಧ ಶ್ರೀ. ಕೆ. ಶಂಕರ್ ಇವರು ಮೇಲೆ ಕ್ರಮ ಸಂಖ್ಯೆ (8) ರಲ್ಲಿ ಓದಲಾದ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಅರ್ಜಿ ಸಂಖ್ಯೆ 4709/2017 ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯಲ್ಲಿ ಪ್ರಮುಖವಾಗಿ ತಾವು ಎರಡನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆಯನ್ನು ಪರಿಗಣಿಸಿರುವುದಿಲ್ಲವೆಂದು ಸಲ್ಲಿಸಿದ್ದು ಈ ಅರ್ಜಿಯಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ದಿನಾಂಕ: 18.12.2018 ರಂದು ನೀಡಿರುವ ಆದೇಶದಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

"The purpose of issuing a 2nd show cause notice is to enable a government servant to give a proper reply and to consider the same while passing the final order. Admittedly, there is reference about the

receipt of the reply being submitted by the applicant to the 2nd show cause notice. Of course the detailed stand taken by the applicant is reflected in the penalty order. But the gist of the stand taken by the applicant in his reply to the 2nd show cause notice is not discussed in the order of penalty. We are of the considered opinion that such an approach is incorrect. What is held by this Tribunal in the case of Yuvaraj Naik J.M vs. State of Karnataka (1966 KSLJ 92) is that the gist of the reply submitted to the second show cause notice must be reasonably considered while passing the penalty order. Though not a detailed discussion is required, reasonable consideration must be reflected".

Hence, we are of the considered opinion that the penalty order liable to be quashed in the light of non-consideration gist of the reply of the application to the 2nd show cause notice in the penalty order dated 6-7-2017.

In the circumstances, we pass the following:-

ORDER

(i) The penalty order dated 06-07-2017 (Annexure A12) is quashed and the matter is sent back to the Government to pass appropriate orders keeping in mind the observation made by this tribunal in Yuvaraja Naik case, supra as the gist of the reply of the applicant is not reasonably considered by the respondent No.1.

(ii) It is also observed that a lenient view may be taken by the Government keeping in mind that the applicant is due to retire within four months.

(iii) Appropriate orders shall be passed by the Government within six months from the date of receipt of a copy of this order.

ಈ ಆದೇಶಗಳ ವಿರುದ್ಧ ಮೇಲ್ಮನವಿ ಸಲ್ಲಿಸಲು ಸೂಕ್ತ ಕಾರಣಗಳಿಲ್ಲವೆಂದು ಕಾನೂನು ಇಲಾಖೆಯು ಅಭಿಪ್ರಾಯ ಪಟ್ಟಿರುತ್ತದೆ. ಅದರಂತೆ ಈ ಪ್ರಕರಣದಲ್ಲಿ ಆಪಾದಿತ ನೌಕರರು ಸರ್ಕಾರದ 2ನೇ ಕಾರಣ ಕೇಳುವ ನೋಟಿಸಿಗೆ ನೀಡಿರುವ ಲಿಖಿತ ಹೇಳಿಕೆಯಲ್ಲಿ ಸಲ್ಲಿಸಿರುವ ಪ್ರಮುಖ ಆಕ್ಷೇಪಣೆಗಳಿಗೆ ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಿದೆ.

1. <u>ಆಪಾದಿತರ ಹೇಳಿಕೆ:</u> ತಮಗೆ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿರುವುದರಿಂದ ಅಪರ ನಿಬಂಧಕರು ವಿಚಾರಣೆಗಳು ಕರ್ನಾಟಕ ಲೋಕಾಯುಕ್ತ ಇವರು ತಮ್ಮ ವಿರುದ್ಧ ದೋಷಾರೋಪಣ ಪಟ್ಟಿಗಳನ್ನು ತಯಾರಿಸಲು ಸಕ್ಷಮ ಪ್ರಾಧಿಕಾರವಾಗಿರುವುದಿಲ್ಲ. ಆದುದರಿಂದ ವಿಚಾರಣಾಧಿಕಾರಿಯು ತಯಾರಿಸಿರುವ ದೋಷಾರೋಪಣೆಗಳು ಕಾನೂನಿಗೆ ವಿರುದ್ಧವಾಗಿದೆ.

<u>ಸರ್ಕಾರದ ಸ್ಪಷ್ಟೀಕರಣ:-</u> ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಹಾಗೂ ಮೇಲ್ಮನವಿ ನಿಯಮಗಳು 1957 ರ ನಿಯಮ 14 ಎ (2)(ಎ) ಯಿಂದ (ಇ) ವರೆಗಿನ (ಪ್ರತಿ ಪುಟ-110) ಅವಕಾಶಗಳ ಅಡಿ ಇಲಾಖಾ ವಿಚಾರಣೆ ನಡೆಸಲು

ಲೋಕಾಯುಕ್ತ ಅಥವ ಉಪಲೋಕಾಯುಕ್ತರಿಗೆ ವಹಿಸಲು ಹಾಗೂ ಲೋಕಾಯುಕ್ತ ಹಾಗೂ ಉಪಲೋಕಾಯುಕ್ತರು ಅಥವಾ ಅವರು ನೇಮಿಸಿದ ವಿಚಾರಣಾಧಿಕಾರಿಯು ವಿಚಾರಣೆ ನಡೆಸಲು ಅವರಿಗೆ ಶಿಸ್ತು ಪ್ರಾಧಿಕಾರದ ಅಧಿಕಾರ ನೀಡಲಾಗಿದೆ. ಆದುದರಿಂದ ಈ ಆಕ್ಷೇಪಣೆಯನ್ನು ಒಪ್ಪಲು ಬರುವುದಿಲ್ಲ.

2 ಆಪಾದಿತರ ಹೇಳಿಕೆ: ತಮ್ಮ ವಿರುದ್ಧ ದಂಡನೆ ವಿಧಿಸಲು ಶಿಫಾರಸ್ಸು ಮಾಡಲು ಲೋಕಾಯುಕ್ತ ಕಾಯ್ದೆ 1984 ರ 7ನೇ ಸೆಕ್ಷನ್‌ನಲ್ಲಿ ಮಾನ್ಯ ಲೋಕಾಯುಕ್ತರಿಗೆ ಅಧಿಕಾರವಿರುವುದಿಲ್ಲ.

ಸರ್ಕಾರದ ಸ್ಪಷ್ಟೀಕರಣ:- ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಹಾಗೂ ಮೇಲ್ಮನವಿ ನಿಯಮಗಳು 1957 ರ ನಿಯಮ 14 ಎ (2)(ಡಿ) ಅನುಸಾರ ವಿಚಾರಣಾ ವರದಿಯ ಮೇಲೆ ಶಿಫಾರಸ್ಸು ಮಾಡಲು ಲೋಕಾಯುಕ್ತ ಅಥವಾ ಉಪಲೋಕಾಯುಕ್ತರಿಗೆ ಅಧಿಕಾರವಿರುತ್ತದೆ. ಆದುದರಿಂದ ಈ ಆಕ್ಷೇಪಣೆಯನ್ನು ಒಪ್ಪಲು ಬರುವುದಿಲ್ಲ.

3 ಆಪಾದಿತರ ಹೇಳಿಕೆ: ದೂರುದಾರರು ತಮ್ಮ ದೂರಿಗೆ ಪರಿಹಾರವನ್ನು ಪಡೆಯಲು ಅನ್ಯ ಅವಕಾಶ ಇರುವುದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ 8ನೇ ಸೆಕ್ಷನ್ ಪ್ರಕಾರ ಮಾನ್ಯ ಲೋಕಾಯುಕ್ತರ ತನಿಖಾ ವ್ಯಾಪ್ತಿಗೆ ಈ ಪ್ರಕರಣವು ಒಳಪಡುವುದಿಲ್ಲ.

ಸರ್ಕಾರದ ಸ್ಪಷ್ಟೀಕರಣ:- ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಪ್ರಕರಣ 8(1)(ಬಿ) ಈ ಕೆಳಕಂಡಂತಿವೆ.

> "if the complainant has or had, any remedy by way of appeal, revision, review or other proceedings before any tribunal, 1[court, officer or other authority and has not availed of the same".

ಪ್ರಸ್ತುತ ಪ್ರಕರಣದಲ್ಲಿ ದೂರುದಾರರು ತಮ್ಮ ವೈಯಕ್ತಿಕ ಸಮಸ್ಯೆಯ ಬಗ್ಗೆ ಯಾವುದೇ ಅಹವಾಲು ಹೇಳಿಕೊಂಡಿರುವುದಿಲ್ಲ. ಇದು ಸಾರ್ವಜನಿಕ ದೂರು ಅರ್ಜಿಯಾಗಿದೆ. ಆದುದರಿಂದ ಪ್ರಕರಣ 8(1)(ಬಿ) ಈ ದೂರಿಗೆ ಅನ್ವಯಿಸುವುದಿಲ್ಲ.

4 ಆಪಾದಿತರ ಹೇಳಿಕೆ: ದೂರುದಾರರು ದೂರನ್ನು ದಾಖಲಿಸಿದ ದಿನಾಂಕದಂದು ಹಾಗೂ ಸಂಬಂಧಿಸಿದ ಪ್ರಕರಣ ನಡೆದಿರುವ ಅವಧಿಯಲ್ಲಿ ಅಂದರೆ ದಿ:19-07-2011 ರಂದು ತಾವು ಬಳ್ಳೂರು ಗ್ರಾಮ ಪಂಚಾಯತಯಲ್ಲಿ ಕರ್ತವ್ಯದಲ್ಲಿ ಇರುವುದಿಲ್ಲ. ಮುಂದುವರೆದು ತಾವು ದಿ:26-06-2011 ರಂದು ಬಳ್ಳೂರು ಗ್ರಾಮ ಪಂಚಾಯತಯಿಂದ ಬನ್ನೇರುಘಟ್ಟ ಗ್ರಾಮ ಪಂಚಾಯತಿಗೆ ವರ್ಗಾವಣೆ ಹೊಂದಿರುತ್ತೇನೆಂದು ತಿಳಿಸಿರುತ್ತಾರೆ. ಆದುದರಿಂದ ದಿ:19-07-2011 ರಲ್ಲಿ ದಾಖಲಿಸಿರುವ ದೂರುಗಳಿಗೂ, ತಮಗೂ ಸಂಬಂಧವಿಲ್ಲ.

ಸರ್ಕಾರದ ಸ್ಪಷ್ಟೀಕರಣ:- ಸದರಿ ದೂರು ಅರ್ಜಿಯು ಆಪಾದಿತ ನೌಕರರು ಸದರಿ ಗ್ರಾಮ ಪಂಚಾಯಿತಿಯಲ್ಲಿ ಈ ಮೊದಲು ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ನಡೆಸಿದರೆನ್ನಲಾದ ಅವ್ಯವಹಾರಗಳಿಗೆ ಸಂಬಂಧಿಸಿದೆ. ಆದುದರಿಂದ ತಾವು ವರ್ಗಾವಣೆಗೊಂಡ ನಂತರ ದೂರು ನೀಡಲಾಗಿದೆ ಎಂಬ ಅಂಶ ಪರಿಗಣಿಸಲು ಬರುವುದಿಲ್ಲ.

5 ಆಪಾದಿತರ ಹೇಳಿಕೆ: ದೂರುದಾರರು ತಮ್ಮ ದೂರಿನಲ್ಲಿ ವಾಸ್ತವಾಂಶವಿಲ್ಲದ ಕಾರಣ ದೂರನ್ನು ಹಿಂತೆಗೆದುಕೊಂಡಿರುತ್ತಾರೆ.

ಸರ್ಕಾರದ ಸ್ಪಷ್ಟೀಕರಣ:- ದೂರುದಾರರು ನೀಡಿದ ದೂರಿನ ಮೇಲೆ ಜಿಲ್ಲಾ ಪಂಚಾಯಿತಿಯ ಉಪಕಾರ್ಯದರ್ಶಿಯವರಿಂದ ತನಿಖೆ ನಡೆಸಿ ವರದಿ ಪಡೆದು ನಂತರ ಶಿಸ್ತು ಕ್ರಮ ಜರುಗಿಸಲಾಗಿದೆ. ಆದುದರಿಂದ ದೂರುದಾರರು ತಮ್ಮ ದೂರನ್ನು ಹಿಂಪಡೆಯದಿದ್ದರು ಸಹ

ತನಿಖಾ ವರದಿಯ ಆಧಾರದ ಮೇಲೆ ಕ್ರಮ ಜರುಗಿಸಲಾಗಿರುವುದರಿಂದ ಆಪಾದಿತರ ಈ ವಾದವನ್ನು ಒಪ್ಪಲು ಬರುವುದಿಲ್ಲ.

6 **ಆಪಾದಿತರ ಹೇಳಿಕೆ:** ಲೋಕಾಯುಕ್ತ ಕಾಯ್ದೆ ಸೆಕ್ಷನ್ 7ರಡಿ ತೆಗೆದುಕೊಂಡಿರುವ ವಿಚಾರಣೆಯನ್ನು ನ್ಯಾಯಸಮ್ಮತವಾಗಿರುವುದಿಲ್ಲ ಹಾಗೂ ಲೋಕಾಯುಕ್ತರು ತಮ್ಮ ತನಿಖಾ ವರದಿಯಲ್ಲಿ ವಾಸ್ತವಾಂಶಗಳನ್ನು ಮರೆಮಾಚಿ ವರದಿಯನ್ನು ಸಲ್ಲಿಸಿರುವುದು ನಿಯಮಬಾಹಿರ. ಲೋಕಾಯುಕ್ತರು ಈ ತನಿಖೆಯನ್ನು ನಿಷಪಕ್ಷಪಾತವಾಗಿ ತನಿಖೆ ನಡೆಸಿರುವುದಿಲ್ಲ. ಈ ವಿಚಾರಣೆಯ ಸಂಬಂಧ ಸಲ್ಲಿಸಿರುವ ಮನವಿಗಳಲ್ಲಿನ ಅಂಶಗಳನ್ನು ತನಿಖಾ ಸಮಯದಲ್ಲಿ ಗಮನಿಸಿರುವುದಿಲ್ಲ.

**ಸರ್ಕಾರದ ಸ್ಪಷ್ಟೀಕರಣ:-** ಆಪಾದಿತ ನೌಕರರು ಲೋಕಾಯುಕ್ತರು ಯಾವ ಅಂಶಗಳನ್ನು ಮರೆಮಾಚಿರುತ್ತಾರೆ ಎಂಬ ಬಗ್ಗೆ ಅಥವ ಅವರು ತೆಗೆದುಕೊಂಡಿರುವ ವಿಚಾರಣೆ ಯಾವ ಕಾರಣಕ್ಕಾಗಿ ನ್ಯಾಯ ಸಮ್ಮತವಾಗಿರುವುದಿಲ್ಲ ಎಂಬ ಬಗ್ಗೆ ನಿರ್ದಿಷ್ಟ ವಿವರಗಳನ್ನು ನೀಡಿರುವುದಿಲ್ಲ.

7 **ಆಪಾದಿತರ ಹೇಳಿಕೆ:** ತಾವು ಯಾವುದೇ ದುರ್ನಡತೆ ಎಸಗಿರುವುದಿಲ್ಲ ಹಾಗೂ ಮಾನ್ಯ ಲೋಕಾಯುಕ್ತರು ಈ ಪ್ರಕರಣದಲ್ಲಿ ತನಿಖೆ ಮಾಡುವ ಅಥವಾ ತನಿಖಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಅಧಿಕಾರಯುಕ್ತವಾಗಿರುವುದಿಲ್ಲ.

**ಸರ್ಕಾರದ ಸ್ಪಷ್ಟೀಕರಣ:-** ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಪ್ರಕರಣ 7(2)(ಎ) ಈ ಕೆಳಕಂಡಂತಿದೆ.

> (2A) Notwithstanding anything contained in sub-sections (1) and (2), the Lokayukta or an Upalokayukta may investigate any action taken by or with the general or specific approval of a public servant, if it is referred to him by the State Government.

ಅದರಂತೆ ಈ ಪ್ರಕರಣದಲ್ಲಿ ತನಿಖೆ ನಡೆಸಲು ಮಾನ್ಯ ಲೋಕಾಯುಕ್ತರು ಅಧಿಕಾರಯುಕ್ತವಾಗಿರುತ್ತಾರೆ. ಆದುದರಿಂದ ಆಪಾದಿತರ ಈ ಹೇಳಿಕೆ ಒಪ್ಪಲು ಬರುವುದಿಲ್ಲ.

ಶ್ರೀ. ಕೆ. ಶಂಕರ್ ರವರು ಸಲ್ಲಿಸಿರುವ ಹೇಳಿಕೆಯನ್ನು ಮೇಲಿನಂತೆ ವಿವರವಾಗಿ ಪರಿಶೀಲಿಸಲಾಗಿದೆ. ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪಗಳನ್ನು ಸಾಬೀತು ಪಡಿಸಲು ಪ್ರಮುಖವಾಗಿ ವರದಿಯ ಕಂಡಿಕೆ 20 ರಿಂದ 25 ರಲ್ಲಿ ಸಮರ್ಥವಾದ ಕಾರಣಗಳನ್ನು ನೀಡಿರುತ್ತಾರೆ. ಅವುಗಳ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ.

**20.** In the cross examination, PW2 has admitted that the spot inspection and approval of sketch has to be made by Revenue Department and formation of layout, basic amenities has to be approved by the town planning authority and after taking approval of Gram Panchayath president and members, DGO has to mutate the property.

**21.** PW1 and PW2 has clearly deposed that the procedure followed by DGO is wrong, basic amenities are not properly provided. The owners of the layout agreed to provide water facility, roads, drainage, electricity supply and only on the oral assurance, panchayath agreed to change the khata. PW1 has clearly denied that the DGO has done his work in accordance with law and followed all the formalities.

22. DW1 has deposed that one Sri. Muniveerappa had submitted an application for change of Khata. The said application was submitted to the CEO, Zilla Panchayath asked him to change the khata. Before changing the khata, DGO had to see that the layout is properly formed. Without doing so, only on the oral directions of the CEO, DGO cannot change the khata.

23. Further DW1 has deposed that he informed CEO that after receipt of the approval from Town Planning Authority, he will change the khata. But DGO has not produced any such documents on record to show that before changing the khata, he informed CEO that he required the approval of town planning. This fact clearly shows that without getting the plan approved by the town planning authority, DGO has changed the khata.

24. Further DW1 has deposed that the then president of Zilla Panchayath Sri. Rathnaji Reddy was pressurizing him along with the applicant to change the khata, but as discussed above, without yielding to any pressure or making any favour, DGO was expected to follow the procedure in accordance with law before changing the khata. Further DW1 has deposed that he had also given endorsement to the complainant to bring the approval from town planning authority, Ballur. But he has not obtained the said approved plan issued by the town planning authority.

25. In the chief examination itself, DW1 has deposed that the CEO instructed him to mutate the property reserved for civic amenities, parks, roads, to the name of Gram Panchayath and then change the khata in respect of remaining property into the name of Sri. Muniveerappa, Sri. Thalamanchi Narasareddy and Sri. Upul Sudarshan Reddy and on the basis of the Government Order, he has changed the mutation in accordance with law. But as observed in Ex D8, before changing the khata, water facility, roads, drainages and electricity supply was not provided to the layout. Therefore, it is very clear that there are irregulaties in formation of layput of Ballur Gram Panchayath, basic amenities are not provided to the layout, allotment of sites were not brought to the notice of the panchayath general body meeting, boundaries were not fixed to the sites as per the conversion order issued by the concerned Deputy Commissiner. DGO committed misconduct in respect of distribution of sites, distribution of Hakku Patra, mot making proper entries in the register, not register proper khata. Thereby the DGO has failed to maintain absolute integrity besides devotion to duty and acted in a manner unbecoming of a Government servant. Hence. I proceed to answer point No.1 in the affirmative.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಕೆ. ಶಂಕರ್, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಬಳ್ಳೂರು ಗ್ರಾಮ ಪಂಚಾಯತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ (ಹಾಲಿ ನಿವೃತ್ತ) ಇವರು ಎರಡನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಉತ್ತರವು ಅಂಗೀಕಾರಾರ್ಹವಾಗಿರುವುದಿಲ್ಲ. ದಿನಾಂಕ: 06.07.2017ರ ಸರ್ಕಾರದ ಆದೇಶದಲ್ಲಿ ಅವರಿಗೆ ಮಾನ್ಯ ಲೋಕಾಯುಕ್ತರ ಶಿಫಾರಸ್ಸಿನಂತೆ "ಅವರ ಮುಂದಿನ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ ಹಾಗೂ ಅವರಿಗೆ ಬಡ್ತಿ ನೀಡಲು ಅವರ ಪ್ರಕರಣವು ಪರಿಗಣನೆಗೆ ಬಂದ ದಿನಾಂಕದಿಂದ ಎರಡು ವರ್ಷಗಳವರೆಗೆ ಅವರ ಬಡ್ತಿಯನ್ನು ಮುಂದೂಡುವ" ದಂಡನೆ ವಿಧಿಸಲಾಗಿತ್ತು. ಪ್ರಸ್ತುತ ಮಾನ್ಯ ಕೆ.ಎ.ಟಿ ಯು ಈ ಆದೇಶವನ್ನು ವಜಾಗೊಳಿಸಿ ಪರಿಷ್ಕೃತ ನಿರ್ಣಯ ತೆಗೆದುಕೊಂಡು ಅವರು ಸಧ್ಯದಲ್ಲಿಯೇ ನಿವೃತ್ತಿ ಹೊಂದುತ್ತಿರುವುದರಿಂದ ಸರ್ಕಾರವು ಸಹಾನುಭೂತಿಯಿಂದ ಪರಿಗಣಿಸುವಂತೆ ಆದೇಶಿಸಿದೆ.

ಮಾನ್ಯ ಕೆ.ಎ.ಟಿ.ಯು ಶ್ರೀ ಕೆ. ಶಂಕರ್ ರವರಿಗೆ ದಂಡನೆ ವಿಧಿಸಿರುವ ದಿನಾಂಕ:06.07.2017ರ ಆದೇಶವನ್ನು ವಜಾಗೊಳಿಸಿರುವ ಹಿನ್ನೆಲೆಯಲ್ಲಿ ಸದರಿ ಆದೇಶವನ್ನು ಹಿಂಪಡೆದು ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪರಿಷ್ಕೃತ ಆದೇಶ ಹೊರಡಿಸಲು ಸರ್ಕಾರವು ನಿರ್ಣಯಿಸಿದೆ. ಶ್ರೀ. ಶಂಕರ್ ರವರು ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಆಕ್ಷೇಪಣೆಗಳು ಅಂಗೀಕಾರರ್ಹವಲ್ಲವಾದ್ದರಿಂದ, ವಿಚಾರಣಾಧಿಕಾರಿಯವರ ವರದಿಯನ್ನು ಅಂಗೀಕರಿಸಿ, ಈ ಮಧ್ಯೆ ಸದರಿಯವರು ವಯೋನಿವೃತ್ತಿ ಹೊಂದಿರುವುದರಿಂದ, ಅವರ ವಿರುದ್ಧ ಸಾಬೀತಾಗಿರುವ ಆರೋಪದ ತೀವ್ರತೆ ಆಧರಿಸಿ, ಅವರ ಪಿಂಚಣಿಯಲ್ಲಿ ಶೇ.10 ರಷ್ಟು ಮೊತ್ತವನ್ನು 10 ವರ್ಷಗಳ ಅವಧಿಗೆ ಕಡಿತಗೊಳಿಸುವ ದಂಡನೆ ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/282/ಗ್ರಾಪಂಕಾ/2017, ಬೆಂಗಳೂರು, ದಿನಾಂಕ: 15-05-2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಕೆ. ಶಂಕರ್, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಬಳ್ಳೂರು ಗ್ರಾಮ ಪಂಚಾಯತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ (ಹಾಲಿ ನಿವೃತ್ತ) ಇವರಿಗೆ ದಂಡನೆ ವಿಧಿಸಿ ಹೊರಡಿಸಿದ್ದ ಸರ್ಕಾರದ ದಿನಾಂಕ:06.07.2017ರ ಆದೇಶವನ್ನು ಈ ಮೂಲಕ ಹಿಂಪಡೆದಿದೆ. ಮತ್ತು ಸದರಿಯವರಿಗೆ "ಕರ್ನಾಟಕ ನಾಗರೀಕ ಸೇವಾ ನಿಯಮ 214(1)(ಎ) ಅಡಿಯಲ್ಲಿ ಪ್ರದತ್ತವಾದ ಅಧಿಕಾರದ ಅಡಿ ಅವರ "ಪಿಂಚಣಿಯಲ್ಲಿ ಶೇ.10 ರಷ್ಟು ಮೊತ್ತವನ್ನು 10 ವರ್ಷಗಳ ಅವಧಿಗೆ ಕಡಿತಗೊಳಿಸುವ" ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

15/5/19

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಅಪರ ನಿಬಂಧಕರು, ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಜಿಲ್ಲೆ.

6. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಆನೇಕಲ್, ಬೆಂಗಳೂರು ನಗರ ಜಿಲ್ಲೆ.
7. ಶ್ರೀ ಕೆ. ಶಂಕರ್, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಬಳ್ಳೂರು ಗ್ರಾಮ ಪಂಚಾಯತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ (ಹಾಲಿ ನಿವೃತ್ತ). ಮನೆ ನಂ.142, ಮುನೇಶ್ವರ ದೇವಸ್ಥಾನದ ಬೀದಿ, ಆನೇಕಲ್ ರೋಡ್, ಅತ್ತಿಬೆಲೆ. ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.
8. ಗಣಕ ಕೋಶ
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.